"ಮಧುರ ಮಕ್ಕಳೇ - ನೀವು ರುದ್ರಜ್ಞಾನ ಯಜ್ಞದಲ್ಲಿ ಕುಳಿತಿದ್ದೀರಿ, ರುದ್ರ ಶಿವತಂದೆಯು ನಿಮಗೆ ಏನನ್ನು ತಿಳಿಸುತ್ತಾರೆಯೋ ಅದನ್ನು ಕೇಳಿ ಅನ್ಯರಿಗೆ ಅವಶ್ಯವಾಗಿ ತಿಳಿಸಬೇಕಾಗಿದೆ"

ಪ್ರಶ್ನೆ: ತಂದೆಯೂ ಯಜ್ಞವನ್ನು ರಚಿಸುತ್ತಾರೆ ಹಾಗೂ ಮನೂಷ್ಯರೂ ಯಜ್ಞವನ್ನು ರಚಿಸುತ್ತಾರೆ - ಇವರೆಡರಲ್ಲಿ ಮುಖ್ಯವಾಗಿ ಯಾವ ಅಂತರವಿದೆ?

ಉತ್ತರ: ಮನುಷ್ಯರು ರುದ್ರಯಜ್ಞವನ್ನು ಶಾಂತಿಯು ಸ್ಥಾಪನೆಯಾಗಲಿ ಅರ್ಥಾತ್ ವಿನಾಶವಾಗದಿರಲಿ ಎಂದು ರಚಿಸುತ್ತಾರೆ ಆದರೆ ತಂದೆಯು ಈ ಯಜ್ಞದಿಂದ ವಿನಾಶದ ಜ್ವಾಲೆಯು ಹೊರಡಲಿ, ಭಾರತವು ಸ್ವರ್ಗವಾಗಲಿ ಎಂದು ಈ ರುದ್ರಯಜ್ಞವನ್ನು ರಚಿಸಿದ್ದಾರೆ. ತಂದೆಯ ಈ ರುದ್ರಜ್ಞಾನಯಜ್ಞದಿಂದ ತಾವು ನರನಿಂದ ನಾರಾಯಣ ಅರ್ಥಾತ್ ಮನುಷ್ಯರಿಂದ ದೇವತೆಗಳಾಗಿಬಿಡುತ್ತೀರಿ.

ಗೀತೆ: ನಿಮ್ಮನ್ನು ಕರೆಯಲು ನನ್ನ ಮನಸ್ಸು ಇಚ್ಛಿಸುತ್ತದೆ................

ಓಂ ಶಾಂತಿ. ಇದು ಎಷ್ಟು ಮಧುರ ಗೀತೆಯಾಗಿದೆ ಮತ್ತು ಎಷ್ಟೊಂದು ಅರ್ಥಸಹಿತವಾಗಿದೆ, ಇದನ್ನು ಯಾರು ವಿಶಾಲಬುದ್ಧಿಯವರಾಗಿದ್ದಾರೆ ಅವರೇ ಚೆನ್ನಾಗಿ ಅರಿತುಕೊಳ್ಳುತ್ತಾರೆ. ಬುದ್ಧಿಯು ನಂಬರ್ವಾರ್ ಇರುತ್ತದೆಯಲ್ಲವೆ - ಉತ್ತಮ-ಮಧ್ಯಮ-ಕನಿಷ್ಠವಾಗಿರುತ್ತದೆ. ಉತ್ತಮಬುದ್ಧಿಯವರು ಇದರ ಅರ್ಥವನ್ನು ಚೆನ್ನಾಗಿ ತಿಳಿದುಕೊಳ್ಳುತ್ತಾರೆ. ನಿಮ್ಮನ್ನು ಕರೆಯಲು ಮನಸ್ಸು ಇಚ್ಛಿಸುತ್ತದೆ. ಇದನ್ನು ಯಾರು ನೆನಪು ಮಾಡುತ್ತಾರೆ? (ಮಕ್ಕಳು) ಮಕ್ಕಳಂತೂ ಅನೇಕರಿದ್ದಾರೆ. ಯಾರು ಬ್ರಾಹ್ಮಣರಾಗಿದ್ದಾರೆಯೋ, ಯಾರು ದೇವತೆಗಳಾಗಿದ್ದಾರೆಯೋ ಅವರೇ ಪೂರ್ಣ 84 ಜನ್ಮಗಳನ್ನು ತೆಗೆದುಕೊಂಡಿದ್ದಾರೆ ಅವರೇ ಹೆಚ್ಚಿನದಾಗಿ ಕರೆಯುತ್ತಾರೆ. ಅವರೇ ಶಿವ ಅಥವಾ ಸೋಮನಾಥನ ಮಂದಿರವನ್ನು ಸ್ಥಾಪನೆ ಮಾಡುತ್ತಾರೆ. ಇದರಿಂದ ಸಿದ್ಧವಾಗುತ್ತದೆ - ನಾವೇ ಯಾರು ಪೂಜ್ಯ ದೇವೀ-ದೇವತೆಗಳಾಗಿದ್ದೆವು, ಈಗ ಪೂಜಾರಿಗಳಾಗಿದ್ದೇವೆ. ಅವಶ್ಯವಾಗಿ ನಾವೇ ಪೂಜ್ಯರಾಗಿದ್ದೆವು ನಂತರ ಪೂಜಾರಿಗಳಾಗಿರುವುದರಿಂದ ಸೋಮನಾಥ ಶಿವನ ಪೂಜೆ ಮಾಡುತ್ತೇವೆ. ರುದ್ರಯಜ್ಞವನ್ನು ಅನೇಕರು ರಚಿಸುತ್ತಾರೆ, ರುದ್ರಜ್ಞಾನಯಜ್ಞವನ್ನು ಎಂದೂ ರಚಿಸುವುದಿಲ್ಲ. ರುದ್ರಯಜ್ಞವೆಂದು ಹೆಸರಿಡುತ್ತಾರೆ. ಈಗಲೂ ರುದ್ರಯಜ್ಞವನ್ನು ರಚಿಸುತ್ತಾರೆ ಆದ್ದರಿಂದ ನೀವು ಅವರಿಗೆ ರುದ್ರ ಯಾರು? ರುದ್ರನು ಎಂದಾದರೂ ಯಜ್ಞವನ್ನು ರಚಿಸಿದ್ದಾರೆಯೇ? ಹೇಗೆ ರಚಿಸಿದರು ಮತ್ತೆ ಅದು ಸಿದ್ಧಿಯಾಯಿತೆ? ಎಂಬುದನ್ನು ಚೆನ್ನಾಗಿ ತಿಳಿಸಬಹುದು. ಏಕೆಂದರೆ ಯಾರೂ ತಿಳಿದುಕೊಂಡಿಲ್ಲ. ನಿಮಗೆ ಈಗ ಜ್ಞಾನದ ಮೂರನೇಯ ನೇತ್ರ ಸಿಕ್ಕಿದೆ. ಪರಮಪಿತ ಪರಮಾತ್ಮನ ವಿನಃ ಮತ್ತ್ಯಾರೂ ಮೂರನೇಯ ನೇತ್ರವನ್ನು ಕೊಡಲು ಸಾಧ್ಯವಿಲ್ಲ. ಜ್ಞಾನಸಾಗರನೆಂದು ಪರಮಪಿತ ಪರಮಾತ್ಮನಿಗೆ ಗಾಯನ ಮಾಡಲಾಗುತ್ತದೆ. ಮನುಷ್ಯರಿಗೆ ಜ್ಞಾನಸಾಗರರೆಂದು ಹೇಳಲು ಸಾಧ್ಯವಿಲ್ಲ. ಈಗ ನಿಮಗೆ ಗೊತ್ತಿದೆ - ನಮಗೆ ತಾತನ ಆಸ್ತಿಯು ಸಿಗುತ್ತದೆ, ಅವರನ್ನೇ ಈ ತಂದೆ ಬಂದು ಅವಿನಾಶಿಜ್ಞಾನರತ್ನಗಳ ದಾನ ಮಾಡಿ ನಂತರ ನಾವೂ ಸಹ ದಾನವನ್ನು ತೆಗೆದುಕೊಂಡು ಅನ್ಯರಿಗೆ ದಾನ ಮಾಡುತ್ತೇವೆ ಎಂದು ನೆನಪು ಮಾಡುತ್ತಾರೆ. ಇದು ಬಹಳ ಸಹಜವಾಗಿದೆ. ಕೇವಲ ನೆನಪು ತರಿಸಿ ನಮಗೆ ಇಬ್ಬರು ತಂದೆಯರು ಇದ್ದಾರೆ. ಭಕ್ತಿಮಾರ್ಗದಲ್ಲಿ ಇಬ್ಬರು ತಂದೆಯರಾಗಿಬಿಡುತ್ತಾರೆ. ಸತ್ಯಯುಗ-ತ್ರೇತಾದಲ್ಲಿ ಲೌಕಿಕ ತಂದೆಯರಷ್ಟೇ ಇರುತ್ತಾರೆ. ಅಲ್ಲಿ ಆಸ್ತಿಯೂ ಸಹ ನೀವು ಇಲ್ಲಿನ ಪುರುಷಾರ್ಥದನುಸಾರ ಪಡೆಯುತ್ತೀರಿ ಅಂದಾಗ ನೀವು ಮಕ್ಕಳು ಬುದ್ಧಿಯನ್ನು ಉಪಯೋಗಿಸಬೇಕು. ಇಂತಿಂತಹ ಸ್ಥಳಗಳಿಗೆ ಹೋಗಿ ರುದ್ರ ಜ್ಞಾನ ಯಜ್ಞವನ್ನು ಯಾರು ರಚಿಸಿದರು? ಎಂದು ಕೇಳಬೇಕು. ರುದ್ರ ಜ್ಞಾನ ಯಜ್ಞವೋ ಅಥವಾ ರುದ್ರ ಯಜ್ಞವೋ? ಮೂಲ ಹೆಸರು ರುದ್ರ ಜ್ಞಾನ ಯಜ್ಞವಾಗಿದೆ. ರುದ್ರನಂತೂ ನಿರಾಕಾರನಾಗಿದ್ದಾರೆ ಅಂದಮೇಲೆ ಅವರು ಯಜ್ಞವನ್ನು ಹೇಗೆ ರಚಿಸುತ್ತಾರೆ? ಅವಶ್ಯವಾಗಿ ಶರೀರ ಧಾರಣೆ ಮಾಡಬೇಕಾಗುತ್ತದೆ. ದಕ್ಷ ಪ್ರಜಾಪತಿಯ ಯಜ್ಞವನ್ನು ಆಚರಿಸುತ್ತಾ ಬರುತ್ತಾರೆ. ದಕ್ಷ ಪ್ರಜಾಪತಿಯು ಯಜ್ಞದಲ್ಲಿ ಅಶ್ವವನ್ನು ಸ್ವಾಹ ಮಾಡುತ್ತಾರೆ, ಕುದುರೆಯನ್ನು ತುಂಡು-ತುಂಡು ಮಾಡಿ ಸುಡುತ್ತಾರೆಂದು ತೋರಿಸುತ್ತಾರೆ. ಅದಕ್ಕೆ ದಕ್ಷ ಪ್ರಜಾಪತಿಯ ಯಜ್ಞವೆಂದು ಹೇಳುತ್ತಾರೆ. ಇದನ್ನು ನೀವೀಗ ಅರಿತುಕೊಂಡಿದ್ದೀರಿ ಅಂದಮೇಲೆ ಇದು ಯಾವ ಯಜ್ಞವಾಗಿದೆ ಎಂದು ಬರೆಯಬೇಕು. ಬಹಳ ಆಡಂಬರದಿಂದ ಯಜ್ಞವನ್ನು ಮಾಡುತ್ತಾರೆ. ಬಹಳಷ್ಟು ಹಣವನ್ನು ಒಟ್ಟುಗೂಡಿಸುತ್ತಾರೆ. ದೊಡ್ಡ-ದೊಡ್ಡ ವ್ಯಕ್ತಿಗಳು ದಾನ ಮಾಡುತ್ತಾರೆ. ಕೆಲವರು 100, ಇನ್ನೂ ಕೆಲವರು 500 ರೂಪಾಯಿಯನ್ನು ದಾನ ಮಾಡುತ್ತಾರೆ. ಈ ರುದ್ರ ಜ್ಞಾನ ಯಜ್ಞದಲ್ಲಂತೂ ನೀವು ಪೂರ್ಣವಾಗಿ ಸ್ವಾಹ ಆಗುತ್ತೀರಿ. ಆದರೆ ಆ ಯಜ್ಞದಲ್ಲಿ ಸ್ವಲ್ಪ-ಸ್ವಲ್ಪ ಹಣವನ್ನು ತೆಗೆದು ಒಟ್ಟುಗೂಡಿಸುತ್ತಾರೆ. ನಂತರ ಬ್ರಾಹ್ಮಣರಿಗೆ ದಕ್ಷಿಣೆ ಸಿಗುತ್ತದೆ. ಇಲ್ಲಂತೂ ತಾವು ಸ್ವಾಹಾ ಆಗಬೇಕಾಗಿದೆ. ಅಲ್ಲಿ ಸ್ವಾಹಾ ಆಗುವ ಮಾತಿಲ್ಲ, ಇಲ್ಲಿ ಬಾಬಾ ನಾನು ತನು-ಮನ-ಧನ ಸಹಿತ ಬರುತ್ತೇನೆ ಎಂದು ತಾವು ಮಕ್ಕಳು ಹೇಳುತ್ತೀರಿ. ಅಲ್ಲಿ ಈ ರೀತಿ ಹೇಳುವುದಿಲ್ಲ. ಆಹುತಿಯಲ್ಲಿ ಎಂದೂ ಈ ರೀತಿ ಹಾಕುವುದಿಲ್ಲ, ಆರತಿ ಇತ್ಯಾದಿಗಳು ಆಗುತ್ತದೆ, ಹಣವನ್ನು ಚಂದ ಎತ್ತುತ್ತಾರೆ. ದೊಡ್ಡ-ದೊಡ್ಡವರಿಂದ ತೆಗೆದುಕೊಳ್ಳುತ್ತಾರೆ. ಈ ರುದ್ರ ಜ್ಞಾನ ಯಜ್ಞದಿಂದಲೇ ವಿನಾಶದ ಜ್ವಾಲೆಯು ಪ್ರಜ್ವಲಿತವಾಗಿದೆ ಎಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ, ಅವರು ಶಾಂತಿಗಾಗಿ ಯಜ್ಞವನ್ನು ರಚಿಸುತ್ತಾರೆ

ಹೊರತು ವಿನಾಶಕ್ಕಾಗಿ ಅಲ್ಲ. ಅಲ್ಲಿ ಶಾಂತಿಗಾಗಿ ಬಹಳ ಕೇಳುತ್ತಾರೆ. ಶಾಂತಿಯಂತೂ ಇಡೀ ಪ್ರಪಂಚಕ್ಕೆ ಬೇಕಲ್ಲವೇ. ಪರಮಾತ್ಮ ಶಾಂತಿಸಾಗರನಾಗಿದ್ದಾರೆ. ಅವರು ಅರ್ಥವನ್ನು ತಿಳಿಸಿಕೊಡುತ್ತಾರೆ. ಪತ್ರಿಕೆಯನ್ನು ಓದುತ್ತೀರೆಂದರೆ ನಿಮಗೆ ತಾವು ಹೇಗೆ ಎಲ್ಲರಿಗೆ ತಿಳಿಸಬೇಕೆಂದು ವಿಚಾರ ನಡೆಯಬೇಕು.

ತಂದೆಗೆ ಗೊತ್ತಿದೆ - ಹೇಗೆ ಬ್ರಹ್ಮಾಕುಮಾರ-ಕುಮಾರಿಯರು ಅಂಗಡಿಯನ್ನು ಸಂಭಾಲನೆ ಮಾಡುತ್ತಿದ್ದೀರಿ. ವ್ಯಾಪಾರಿಯ ಯಾವ ಅಂಗಡಿ ಚೆನ್ನಾಗಿ ನಡೆಯುತ್ತದೆ? ಯಾವ ಯಜಮಾನರು ಒಳ್ಳೆಯವರಾಗಿದ್ದಾರೆ? ಅದಂತೂ ಬೆಲ್ಲಕ್ಕೆ ಗೊತ್ತು ಮತ್ತು ಅದರ ಚೀಲಕ್ಕೆ ಗೊತ್ತು. ಈ ಬ್ರಹ್ಮಾರವರು ಚೀಲವಾಗಿದ್ದಾರೆ. ಇವು ಬಹಳ ರಮಣೀಕ ಮಾತುಗಳಾಗಿವೆ ಅಂದಾಗ ರುದ್ರ ಜ್ಞಾನಯಜ್ಞದಿಂದ ವಿನಾಶದ ಜ್ವಾಲೆಯು ಬಂದಿತು ಎಂದು ಬರೆಯಲಾಗುತ್ತದೆ. ಮನುಷ್ಯರು ಶಾಂತಿಗಾಗಿ ಯಜ್ಞವನ್ನು ರಚಿಸುತ್ತಾರೆ ಆದರೆ ಇದು ಸತ್ಯ-ಸತ್ಯವಾದ ಯಜ್ಞವಾಗಿದೆ. ಆ ಬ್ರಾಹ್ಮಣರಿಗೆ ಅನೇಕ ವ್ಯಾಪಾರಿಗಳು ಇರುತ್ತಾರೆ. ಈಗ ನೀವು ಬ್ರಾಹ್ಮಣರಿಗೆ ಒಬ್ಬರೇ ವ್ಯಾಪಾರಿ ಆಗಿದ್ದಾರೆ (ಮಾಲೀಕ). ತಂದೆಯು ರುದ್ರನಾಗಿದ್ದಾರೆ. ರುದ್ರ ತಂದೆ ಎಂದಾದರೂ ಹೇಳಿ, ಶಿವ ಎಂದಾದರೂ ಹೇಳಿ, ಅಥವಾ ಸೋಮನಾಥನೆಂದಾದರೂ ಹೇಳಿ ಅವರು ಜ್ಞಾನ ಯಜ್ಞವನ್ನು ರಚಿಸುತ್ತಾರೆ. ಅದರಲ್ಲಿ ನೀವು ಕುಳಿತಿದ್ದೀರಿ. ಆ ಯಜ್ಞವಂತೂ 2-4 ದಿನ ನಡೆಯುತ್ತದೆ ಆದರೆ ನಿಮ್ಮ ಈ ರುದ್ರ ಜ್ಞಾನ ಯಜ್ಞವು ಬಹಳ ದೊಡ್ಡದಾಗಿದೆ. ಇದರಲ್ಲಿ ಸಮಯ ಹಿಡಿಸುತ್ತದೆ. ಇದು ನರನಿಂದ ನಾರಾಯಣ ಅಥವಾ ಮನುಷ್ಯರಿಂದ ದೇವತೆಗಳಾಗುವ ಯಜ್ಞವಾಗಿದೆ. ಅವರು ಈ ರೀತಿ ಹೇಳುವುದಿಲ್ಲ. ಹೇಗೆ ಅವರನ್ನು ಎಚ್ಚರಿಸಬೇಕೆಂದು ಅವರು ತಿಳಿಸುತ್ತಾರೆ. ದೊಡ್ಡ-ದೊಡ್ಡವರಿಗೆ ತಿಳಿಸಿ - ನೀವು ಈಗ ಯಜ್ಞವನ್ನು ರಚಿಸುತ್ತೀರಿ ಅದರಲ್ಲಿ ತಪ್ಪಿದೆ, ಪರಮಪಿತ ಪರಮಾತ್ಮನು ಕಲ್ಪ-ಕಲ್ಪ ಸಂಗಮದಲ್ಲಿ ಬರುತ್ತಾರೆ. ಶಾಸ್ತ್ರಗಳಲ್ಲಿ ಯುಗೇ-ಯುಗೇ ಎಂದು ಬರೆದುಬಿಟ್ಟಿದ್ದಾರೆ. ಈ ತಪ್ಪನ್ನು ಮಾಡಿಬಿಟ್ಟಿದ್ದಾರೆ. ಹಾಗೆಯೇ ರುದ್ರಯಜ್ಞವನ್ನು ರಚಿಸುತ್ತಾರೆ ಆದರೆ ವಾಸ್ತವದಲ್ಲಿ ಇದು ರುದ್ರ ಜ್ಞಾನ ಯಜ್ಞವಾಗಿದೆ. ಶಿವನ ಹೆಸರು ರುದ್ರ ಎಂದಾಗಿದೆ, ಅವರೇ ಜ್ಞಾನ ಯಜ್ಞವನ್ನು ರಚಿಸುತ್ತಾರೆ. ಹೇಗೆ ಇಬ್ರಾಹಿಂ ತಮ್ಮ ಇಸ್ಲಾಂ ಧರ್ಮದ ಸ್ಥಾಪನೆ ಮಾಡಿದರು, ಬುದ್ಧನು ಬೌದ್ಧ ಧರ್ಮದ ಸ್ಥಾಪನೆ ಮಾಡಿದರು, ಹಾಗೆಯೇ ರುದ್ರನದ್ದು ಜ್ಞಾನ ಯಜ್ಞವಾಗಿದೆ. ಇದರಿಂದ ವಿನಾಶದ ಜ್ವಾಲೆಯು ಪ್ರಜ್ವಲಿತವಾಗುವುದು ಆದರೆ ಮನುಷ್ಯರು ಶಾಂತಿಗಾಗಿ ಯಜ್ಞವನ್ನು ರಚಿಸುತ್ತಾರೆ ಅರ್ಥಾತ್ ವಿನಾಶವನ್ನು ಬಯಸುವುದಿಲ್ಲ. ಸ್ವರ್ಗದ ಸ್ಥಾಪನೆಗಾಗಿ ನರಕದಿಂದ ವಿನಾಶವಾಗುವುದಂತೂ ಒಳ್ಳೆಯದೇ ಅಲ್ಲವೇ.

ಭಾರತವು ಅವಿನಾಶಿ ಖಂಡವಾಗಿದೆ, ಅವಶ್ಯವಾಗಿ ಭಾರತದ ಮನುಷ್ಯರ ಸಂಪ್ರದಾಯವು ಬಹಳ ಹೆಚ್ಚಾಗಿರಬೇಕು. ಆದಿಸನಾತನ ದೇವೀ-ದೇವತಾ ಧರ್ಮವಿತ್ತು. ಅದಕ್ಕೆ ಇಡೀ ಕಲ್ಪವಾಗಿದೆ. ಶಾಸ್ತ್ರಗಳಲ್ಲಿ 33 ಕೋಟಿ ಎಂದು ಬರೆದಿದ್ದಾರೆ ಆದರೆ ಇದನ್ನು ತಿಳಿಸಬೇಕು - ಅವಶ್ಯವಾಗಿ ಅನ್ಯ ಎಲ್ಲಾ ಧರ್ಮದವರಿಗಿಂತ ದೇವತಾ ಧರ್ಮದ ಜನಸಂಖ್ಯೆಯು ಹೆಚ್ಚಾಗಿರುವುದು ಆದರೆ ಇವರು ಅನ್ಯ ಧರ್ಮಗಳಲ್ಲಿ ಸೇರಿ ಹೋಗಿದ್ದಾರೆ ಅಂದಾಗ ಹೇಗೆ ಬರುವುದು! ಬೌದ್ಧಿ, ಕ್ರಿಶ್ಚಿಯನ್ಸ್, ಮುಸ್ಲಿಂ ಅನೇಕರಿದ್ದಾರೆ ಆದ್ದರಿಂದ ದೇವತಾಧರ್ಮದ ಜನಸಂಖ್ಯೆ ಕಡಿಮೆ ಆಗಿಬಿಟ್ಟಿದೆ. ಇದೂ ಸಹ ಡ್ರಾಮಾ ಆಗಿದೆ. ಇದರಲ್ಲಿ ತಿಳಿದುಕೊಳ್ಳುವ ವಿಶಾಲಬುದ್ಧಿ ಬೇಕು. ಎಲ್ಲಿಯವರೆಗೆ ಬುದ್ಧಿಯಲ್ಲಿ ಜ್ಞಾನವು ಕುಳಿತುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಕೇವಲ ಅರ್ಪಣಮಯ ಆಗುವುದರಿಂದ ಏನು ಪ್ರಯೋಜನ? ಅರ್ಪಣೆಯಂತೂ ಅನೇಕರಾಗುತ್ತಾರೆ. ಅಂದರೆ ಯಾರು ಚೆನ್ನಾಗಿ ಧಾರಣೆ ಮಾಡಿ ಅನ್ಯರಿಗೆ ಮಾಡಿಸುತ್ತಾರೆ, ಪ್ರಜೆಗಳನ್ನು ಮಾಡಿಕೊಳ್ಳುತ್ತಾರೆ ಅವರೇ ಒಳ್ಳೆಯ ಪದವಿಯನ್ನು ಪಡೆಯುತ್ತಾರೆ.

ನಿಮ್ಮನ್ನು ಕರೆಯಲು ಮನಸ್ಸು ಹಾತೊರೆಯುತ್ತಿದೆ............ ಈ ಗೀತೆಯಂತೂ ಸರಿಯಾಗಿದೆ. ಎಲ್ಲದಕ್ಕಿಂತ ಮೊದಲು 84 ಜನ್ಮಗಳನ್ನು ಯಾರು ತೆಗೆದುಕೊಳ್ಳಬಹುದು? ಯಾರು ಮೊಟ್ಟಮೊದಲು ಇದ್ದರೋ ಅವರು. ಅವರಂತೂ ದೇವೀ-ದೇವತೆಗಳೇ ಆಗಿದ್ದರು ಮತ್ತು ಭಾರತದಲ್ಲಿಯೇ ಇದ್ದರು. ಈಗಂತೂ ಕೆಲವರು ಕೆಲವೊಂದು ಕಡೆ, ಇನ್ನೂ ಕೆಲವರು ಕೆಲವೊಂದು ಕಡೆ ಸೇರಿ ಹೋಗಿದ್ದಾರೆ. ಕೆಲವರಂತೂ ಭಾರತದಿಂದ ಹೊರಗೆ ಹೋಗಿದ್ದಾರೆ. ಇಲ್ಲದಿದ್ದರೆ ವಾಸ್ತವದಲ್ಲಿ ಭಾರತದಂತಹ ಅತೀ ದೊಡ್ಡ ತೀರ್ಥ ಸ್ಥಾನವು ಮತ್ತ್ಯಾವುದೂ ಇಲ್ಲ. ಮತ್ತೆಲ್ಲಾ ಧರ್ಮ ಸ್ಥಾಪಕರು ಯಾರು ಇದ್ದಾರೋ ಅವರನ್ನೂ ಸಹ ಪಾವನ ಮಾಡಲು ಭಗವಂತನು ಭಾರತದಲ್ಲಿಯೇ ಬರಬೇಕಾಗುತ್ತದೆ ಏಕೆಂದರೆ ಎಲ್ಲರೂ ಪತಿತರಾಗಿದ್ದಾರೆ, ಎಲ್ಲರನ್ನು ಪಾವನರನ್ನಾಗಿ ಮಾಡುವವರು ಒಬ್ಬರೇ ಆಗಿದ್ದಾರೆ, ಅವರನ್ನು ನೀವು ತಿಳಿದುಕೊಂಡಿದ್ದೀರಿ. ನಿಮ್ಮಲ್ಲಿಯೂ ಸಹ ನಂಬರ್ವಾರ್ ಯಥಾರ್ಥ ರೀತಿಯಲ್ಲಿ ತಿಳಿದುಕೊಳ್ಳುತ್ತಾರೆ. ನೀವು ಹೇಳುತ್ತೀರಿ - ನಾವು ರುದ್ರ ಜ್ಞಾನಯಜ್ಞದಲ್ಲಿ ಕುಳಿತಿದ್ದೇವೆ. ಇಂತಹ ಯಾವುದಾದರೂ ಯಜ್ಞವಾಗುತ್ತದೆಯೇ, ಯಾವುದರಲ್ಲಿ ಇಷ್ಟು ಸಮಯ ಕುಳಿತಿದ್ದೀರಿ ಕುಳಿತು ಏನು ಮಾಡುತ್ತೀರಿ? ಶಿವತಂದೆಯು ಯಾವ ಜ್ಞಾನವನ್ನು ತಿಳಿಸುತ್ತಾರೋ ಅದನ್ನು ಕೇಳುತ್ತಲೇ ಇರುತ್ತೀರಿ. ಎಲ್ಲಿಯವರೆಗೆ ಶಿವತಂದೆಯು ಈ ಶರೀರದಲ್ಲಿ ಇರುತ್ತಾರೆಯೋ ಅಲ್ಲಿಯವರೆಗೆ ಕೇಳುತ್ತಲೇ ಇರುತ್ತೀರಿ. ಪ್ರಜಾಪಿತ ಬ್ರಹ್ಮಾರವರೂ ಸಹ ಅವಶ್ಯವಾಗಿ ಇಲ್ಲಿಯೇ ಇರುವವರಲ್ಲವೇ. ಬ್ರಹ್ಮನ ರಾತ್ರಿ ಹಾಗೂ ಬ್ರಹ್ಮನ ದಿನ ಎಂದು ಗಾಯನವಿದೆ. ಸೂಕ್ಷ್ಮವತನವಾಸಿ ಬ್ರಹ್ಮನದಿನ ಮತ್ತು ರಾತ್ರಿಯನ್ನು ಆಚರಿಸುತ್ತಾರೆಯೇ? ಅವರಂತೂ ಸೂಕ್ಷ್ಮವತನವಾಸಿ ದೇವತೆಯಾಗಿದ್ದಾರೆ. ಹಗಲು ಮತ್ತು ರಾತ್ರಿಯ ಪ್ರಶ್ನೆ ಇಲ್ಲಿಯದಾಗಿದೆ. ಬ್ರಹ್ಮನರಾತ್ರಿ ಎಂದರೆ ಪತಿತ ಮತ್ತೆ ಅವರೇ ಪಾವನರಾದಾಗ ಹಗಲಾಗುತ್ತದೆ. ಬ್ರಹ್ಮಾರವರನ್ನು ಪಾವನರನ್ನಾಗಿ ಮಾಡುವವರು ಅವರು ಒಬ್ಬರೇ. ಅವರು ಒಬ್ಬರೇ ಸದ್ಗುರು ಆಗಿದ್ದಾರೆ. ಸತ್ಯ ತಂದೆ, ಸತ್ಯ ಶಿಕ್ಷಕ, ಸದ್ಗುರು ಮೂವರು ಒಟ್ಟಿಗೆ ಇದ್ದಾರೆ. ಮೊದಲು ಅವಶ್ಯವಾಗಿ ತಂದೆಯ ಮಕ್ಕಳಾಗುತ್ತೀರಿ

ನಂತರ ಪದವಿಯನ್ನು ಶಿಕ್ಷಕರಿಂದ ಪಡೆಯುತ್ತೀರಿ. ನಂಬರ್ವಾರ್ ಆಗಿದೆಯಲ್ಲವೇ. ಇದೂ ಸಹ ಬುದ್ಧಿಯಲ್ಲಿ ಇದ್ದಾಗ ಎಷ್ಟೊಂದು ಖುಷಿ ಇರುತ್ತದೆ. ನೀವು ಮೊದಲು ಬೇಹದ್ದಿನ ತಂದೆಯವರಾಗಿದ್ದೀರಿ. ಇಲ್ಲಿ ಪಾತ್ರವನ್ನು ಅಭಿನಯಿಸಲು ಬಂದಿದ್ದೀರಿ. ಭಕ್ತಿಮಾರ್ಗದಲ್ಲಿ ಬೇಹದ್ದಿನ ತಂದೆಯನ್ನು ನೆನಪು ಮಡುತ್ತಾ ಬಂದಿದ್ದೀರಿ ಏಕೆಂದರೆ ಅವರು ಸ್ವರ್ಗದ ರಚಯಿತನಾಗಿದ್ದಾರೆ. ಅವಶ್ಯವಾಗಿ ಸ್ವರ್ಗದ ರಾಜ್ಯಭಾಗ್ಯವನ್ನು ಕೊಡುವವರಾಗಿದ್ದಾರೆ. ಇದನ್ನು ತಿಳಿಸುವುದಂತೂ ಬಹಳ ಸಹಜವಾಗಿದೆ. ಬುದ್ಧಿವಂತರೇ ತಿಳಿಸಲು ಸಾಧ್ಯ. ವಾಸ್ತವದಲ್ಲಿ ಬುದ್ಧಿವಂತರು ತಾವು ಬ್ರಾಹ್ಮಣರಾಗಿದ್ದೀರಿ. ನಿಮ್ಮಲ್ಲಿ ಯಾರು ಬುದ್ಧಿವಂತರಿದ್ದಾರೆ, ಅವರಲ್ಲಿಯೂ ನಂಬರ್ವಾರ್ ಇದ್ದಾರೆ. ಪ್ರಪಂಚದ ಬುದ್ಧಿವಂತರೂ ಸಹ ನಂಬರ್ವಾರ್ ಇರುತ್ತಾರಲ್ಲವೇ. ಇಲ್ಲಿಯೂ ಸಹ ಯಾರು ಬುದ್ಧಿವಂತರಾಗಿರುತ್ತಾರೆಯೋ ಅವರು ಅವಶ್ಯವಾಗಿ ಒಳ್ಳೆಯ ನಂಬರನ್ನು ಪಡೆಯುತ್ತಾರೆ. ಪ್ರತಿಯೊಬ್ಬರು ನಾವು ಎಲ್ಲಿಯವರೆಗೆ ಬುದ್ಧಿವಂತರಾಗಿದ್ದೇವೆ? ಎಂದು ನಿಮ್ಮ ಹೃದಯದೊಂದಿಗೆ ಕೇಳಿಕೊಳ್ಳಿ. ಹೇಗೆ ತಂದೆಯು ಮುರುಳಿಯನ್ನು ನುಡಿಸುತ್ತಾರೋ ಹಾಗೆಯೇ ಅಲ್ಲಿಯೂ ಸಹ ನಿಮ್ಮ ಮುರುಳಿ ನುಡಿಸಬಹುದಾಗಿದೆ. ರುದ್ರಯಜ್ಞ ಮತ್ತು ರುದ್ರ ಜ್ಞಾನಯಜ್ಞದಲ್ಲಿ ರಾತ್ರಿ-ಹಗಲಿನ ಅಂತರವಿದೆ ಎಂದು ನೀವು ಅವರಿಗೆ ತಿಳಿಸಿ. ರುದ್ರಜ್ಞಾನಯಜ್ಞವನ್ನು ರಚಿಸುವುದರಿಂದ ವಿನಾಶದ ಜ್ವಾಲೆಯು ಹೊರಡಿತು, ಭಾರತವು ಸ್ವರ್ಗವಾಯಿತು ಆದರೆ ಮನುಷ್ಯರು ವಿನಾಶವಾಗದಿರಲಿ ಎಂದರೆ ಸ್ವರ್ಗದ ಸ್ಥಾಪನೆ ಆಗದಿರಲಿ ಎಂದು ಯಜ್ಞವನ್ನು ರಚಿಸುತ್ತಾರೆ. ಇದಂತೂ ವಿರುದ್ಧವಾದ ಮಾತಾಗಿದೆಯಲ್ಲವೇ. ಆದ್ದರಿಂದಲೇ ತಂದೆಯು ತಿಳಿಸುತ್ತಾರೆ - ನಾನು ಇವರೆಲ್ಲರನ್ನು ಉದ್ಧಾರ ಮಾಡಲು ಬಂದಿದ್ದೇನೆ. ರುದ್ರಜ್ಞಾನಯಜ್ಞವನ್ನು ರಚಿಸುತ್ತೇನೆ, ಅಂದಾಗ ನೀವು ಪ್ರತಿಜ್ಞೆ ಮಾಡುತ್ತೀರಿ - ಬಾಬಾ ನಾವು ನಿಮ್ಮಿಂದ ಕೇಳಿ ಅನ್ಯರಿಗೆ ತಿಳಿಸುತ್ತೇವೆ. ಒಳ್ಳೆಯದು, ಅನ್ಯರಿಗೆ ತಿಳಿಸಿ. ಮೊದಲು ಇಲ್ಲಂತೂ ರಿಪೀಟ್ ಮಾಡಿ, ಘಳಿಗೆ-ಘಳಿಗೆಗೂ ರಿಪೀಟ್ ಮಾಡಬೇಕು. ಇದರಿಂದ ಮತ್ತೆ ನೀವು ಎಲ್ಲಿ ಬೇಕಾದರೂ ತಿಳಿಸಲು ಸಾಧ್ಯವಾಗುತ್ತದೆ. ಇದು ಒಳ್ಳೆಯ ವಿಷಯವಾಗಿದೆ. ಆ ಯಜ್ಞದಲ್ಲಂತೂ ಎಳ್ಳು,ಎಣ್ಣೆ ಇತ್ಯಾದಿಗಳನ್ನು ಹಾಕುತ್ತಾರೆ. ನನ್ನ ರುದ್ರ ಜ್ಞಾನ ಯಜ್ಞದಲ್ಲಂತೂ ಇಡೀ ಹಳೆಯ ಪ್ರಪಂಚದ ಸಾಮಾಗ್ರಿಗಳೇ ಸ್ವಾಹಾ ಆಗಿತ್ತು. ಅಂದರೆ ಇವೆಲ್ಲಾ ಮಾತುಗಳು ಕೆಲವರ ಬುದ್ಧಿಯಲ್ಲಿ ಚೆನ್ನಾಗಿ ಧಾರಣೆ ಆಗುವುದಿಲ್ಲ. ತಂದೆಯ ನೆನಪನ್ನು ಮಾಡದಿದ್ದರೆ ಬುದ್ಧಿಯ ಬೀಗವು ತೆರೆಯುವುದಿಲ್ಲ. ನಾನೂ ಸಹ ಏನು ಮಾಡಲಿ ಎಂದು ತಂದೆಯು ತಿಳಿಸುತ್ತಾರೆ. ಈ ಸಮಯದಲ್ಲಿ ಎಲ್ಲರ ಬುದ್ಧಿಯು ಪತಿತವಾಗಿದೆ. ಅವರನ್ನು ಪಾವನರನ್ನಾಗಿ ಮಾಡುತ್ತೇನೆ. ಯಾರು ನನ್ನನ್ನು ನೆನಪು ಮಾಡುವುದಿಲ್ಲವೋ ಅವರಲ್ಲಿ ಧಾರಣೆ ಆಗಲು ಸಾಧ್ಯವಿಲ್ಲ. ಬುದ್ಧಿಯ ಬೀಗವು ಹೇಗೆ ತೆಗೆಯುವುದು? ನೆನಪಿನಿಂದಲೇ ತೆರೆಯುತ್ತದೆ. ಪ್ರಿಯಾತಿಪ್ರಿಯ ತಂದೆಯಾಗಿದ್ದಾರೆ, ಅವರನ್ನು ಬಹಳ ನೆನಪು ಮಾಡುತ್ತಾರೆ. ಶಿವತಂದೆಯದು ಎಷ್ಟೊಂದು ಮಹಿಮೆ ಇದೆ! ಶಿವನ ಪೂಜೆಯೂ ಸಹ ಆಗುತ್ತದೆ ಅಂದಮೇಲೆ ಅವರು ಅವಶ್ಯವಾಗಿ ಬರುವವರಲ್ಲವೇ. ಕರ್ಮೇಂದ್ರಿಯಗಳು ಇಲ್ಲದೆ ಬಂದು ಏನು ಮಾಡಲು ಸಾಧ್ಯ? ಆದ್ದರಿಂದ ಈಗ ಬ್ರಹ್ಮಾರವರಲ್ಲಿ ಬಂದಿದ್ದೇನೆ. ತಾವು ಮಕ್ಕಳು ಬಾಪ್ದಾದಾರವರ ಸಮ್ಮುಖದಲ್ಲಿ ಕುಳಿತಿದ್ದೀರಿ ಆದರೆ ದೇಹಾಭಿಮಾನ ಇರುವ ಕಾರಣ ತಂದೆಯ ಪ್ರತಿ ಅಷ್ಟೊಂದು ಪ್ರೀತಿ, ಗೌರವ ಇರುವುದಿಲ್ಲ. ತಂದೆಯ ಸೂಚನೆಯ ಅನುಸಾರ ವಿರಳ ನಡೆಯುತ್ತಾರೆ, ಅಹಂಕಾರದಲ್ಲಿ ಬಂದುಬಿಡುತ್ತಾರೆ. ನಾನು ನಿರಹಂಕಾರಿಯಾಗಿದ್ದೇನೆ ಎಂದು ತಂದೆಯು ತಿಳಿಸುತ್ತಾರೆ, ನಿಮಗೆ ಇಷ್ಟೊಂದು ಅಹಂಕಾರ ಏಕೆ ಬರುತ್ತದೆ? ನಾನೇ ಬುದ್ಧಿವಂತನಾಗಿದ್ದೇನೆ ಎಂದು ತಿಳಿಯುತ್ತಾರೆ ಆ ಕಾರಣ ಇಷ್ಟೊಂದು ದೇಹಾಭಿಮಾನವು ಬಂದುಬಿಡುತ್ತದೆ.

ಈಗ ಯಾರ ಪತಿಯಾದರೂ ಶರೀರ ಬಿಡುತ್ತಾರೆಂದರೆ ಅವರ ದೇಹವು ಸಮಾಪ್ತಿ ಆಯಿತು. ಉಳಿದಂತೆ ಆತ್ಮವು ಹೊರಟು ಹೋಯಿತು. ಮತ್ತೆ ಆ ಆತ್ಮನನ್ನು ಬ್ರಾಹ್ಮಣರಲ್ಲಿ ಕರೆಸುತ್ತಾರೆ. ದೇಹವನ್ನಂತೂ ಕರೆಯುವುದಿಲ್ಲ. ಭಾವನೆಯನ್ನು ಇಟ್ಟುಕೊಳ್ಳುವ ಕಾರಣ ಭಾವನೆಯ ಫಲ ಸಿಗುತ್ತದೆ. ಪತಿಯನ್ನು ನೆನಪು ಮಾಡುತ್ತಿದ್ದರೂ ಪತಿಯ ಸಾಕ್ಷಾತ್ಕಾರವಾಗುತ್ತದೆ. ತಂದೆಯು ಸಾಕ್ಷಾತ್ಕಾರ ಮಾಡಿಸುತ್ತಾರಲ್ಲವೇ. ಹೀಗೆ ಅನೇಕರಿಗೆ ಪ್ರೀತಿ ಇರುತ್ತದೆ. ಆತ್ಮವೇ ಬರುವುದಲ್ಲವೇ. ಯಾರಿಗಾದರೂ ಸ್ತ್ರೀಯಲ್ಲಿ ಪ್ರೀತಿ ಇದೆ ಎಂದರೆ ಅದಕ್ಕಾಗಿ ಭಾವನೆಯ ಫಲ ಸಿಕ್ಕಿಬಿಡುತ್ತದೆ. ಸ್ತ್ರೀಯನ್ನು ನೋಡುತ್ತಾರೆ, ಅವರಿಗೆ ಇಷ್ಟವಾದ ವಸ್ತುಗಳನ್ನು ತೆಗೆದುಕೊಟ್ಟು ಬರುತ್ತಾರೆ, ತಾವೇ ಅವರಿಗೆ ತೊಡಿಸುತ್ತಾರೆ. ಹೀಗೆ ಬಹಳಷ್ಟು ಆಗುತ್ತಾ ಬಂದಿದೆ. ಮೊದಲು ಬಹಳ ವಿಧಿಯಿಂದ ಶ್ರಾದ್ಧವನ್ನು ತಿನ್ನಿಸುತ್ತಿದ್ದರು. ಹೇಗೆ ಗಣೇಶ ಅಥವಾ ಗುರುನಾನಕ್ ಮುಂತಾದವರನ್ನು ನೆನಪು ಮಾಡುತ್ತಾರೆಂದರೆ ಅವರಿಗೆ ಸಾಕ್ಷಾತ್ಕಾರವಾಗುತ್ತದೆ. ಹೀಗೆ ಅನೇಕರಿಗೆ ಆಗುತ್ತದೆ. ಆದರೆ ಆ ಬೀಗದ ಕೈ ತಂದೆಯೊಬ್ಬರ ಕೈಯಲ್ಲಿಯೇ ಇದೆ. ತಂದೆಯು ತಿಳಿಸುತ್ತಾರೆ - ಈ ಸಾಕ್ಷಾತ್ಕಾರದ ಮಾತುಗಳೂ ಸಹ ನಾಟಕದಲ್ಲಿ ನಿಗದಿಯಾಗಿದೆ. ಸಾಕ್ಷಾತ್ಕಾರವನ್ನು ಮಾಡಿಸಿದೆವು, ಡ್ರಾಮಾ ನಡೆದು ಹೋಯಿತು, ನಿಲ್ಲುವುದಿಲ್ಲ. ಡ್ರಾಮಾವನ್ನೂ ಸಹ ಚೆನ್ನಾಗಿ ಅರಿಯಬೇಕಾಗುತ್ತದೆ. ತಂದೆಯ ಪ್ರತಿ ಒಳ್ಳೆಯ ಗೌರವವನ್ನು ಇಟ್ಟುಕೊಳ್ಳಿ. ತಂದೆಯ ಪ್ರತಿ ಇಷ್ಟೊಂದು ಗೌರವ, ಪ್ರೀತಿಯನ್ನು ಇಟ್ಟುಕೊಳ್ಳುವುದು ಪರಿಶ್ರಮವೆಂದು ತಿಳಿಯುತ್ತಾರೆ, ಅವರಂತೂ ನಿರಾಕಾರನಾಗಿದ್ದಾರೆಂದು ತಿಳಿಯುತ್ತಾರೆ. ಇವರಂತೂ (ಬ್ರಹ್ಮಾ) ತಂದೆಯ ರಥವಾಗಿದ್ದಾರೆ. ಇವರಿಗೆ ನಾವೇನು ಮಾಡುವುದು? ನಾವಂತೂ ನಿರಾಕರನನ್ನೇ ನೆನಪು ಮಾಡುತ್ತೇವೆ ಎಂದು ಹೇಳುತ್ತಾರೆ. ಒಳ್ಳೆಯದು, ನಿರಾಕಾರನ ಮಡಿಲಿಗೆ ಹೋಗಿ ತೋರಿಸಿ? ನಿರಾಕಾರನ ಜೊತೆ ತಿನ್ನಿ, ಕುಡಿಯಿರಿ. ನೀವು ಇವರಬಳಿ ಹೇಗೆ ಬರುತ್ತೀರಿ? ಅದಕ್ಕೆ ಹೇಳುತ್ತಾರೆ - ಇಲ್ಲ, ಬಾಬಾ ತಾವು ಇವರಲ್ಲಿ ಇದ್ದೀರಿ, ತಮ್ಮನ್ನೇ ಇವರಲ್ಲಿ ವಿರಾಜಮಾನವೆಂದು ತಿಳಿದು ನಡೆಯುತ್ತೇವೆ. ಇದು ಬಹಳ ವಿರಳವಾಗಿ ಮನುಷ್ಯರ ಬುದ್ಧಿಯಲ್ಲಿ ಇರುತ್ತದೆ. ಈ ರೀತಿ ಅನೇಕರಿದ್ದಾರೆ, ನಮಗೆ ತಂದೆಯ ಮೇಲೆ ಬಹಳ ಪ್ರೀತಿ ಇದೆ, ನಾವು ಇಷ್ಟು ಗಂಟೆಗಳು ತಂದೆಯನ್ನು ನೆನಪು ಮಾಡುತ್ತೇವೆ ಎಂದು ಸುಳ್ಳು ಹೇಳುತ್ತಾರೆ. ಬಾಬಾರವರೂ ಸಹ ಹೇಳುತ್ತಾರೆ - ನಾನೂ ಸಹ ಪೂರ್ಣ ನೆನಪು ಮಾಡುವುದಿಲ್ಲ.

ನಾನಂತೂ ಒಬ್ಬನೇ ಅಗಲಿ ಸಿಕ್ಕಿರುವ ಮಗು ಆಗಿದ್ದೇನೆ. ಆದರೂ ಸಹ ನಾನು ನಿರಂತರ ನೆನಪು ಮಾಡಲು ಬಹಳ ಪುರುಷಾರ್ಥ ಮಾಡುತ್ತೇನೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಅರ್ಪಣೆ ಆಗುವ ಜೊತೆಜೊತೆಗೆ ತಮ್ಮ ಬುದ್ಧಿಯನ್ನು ವಿಶಾಲ ಮಾಡಿಕೊಳ್ಳಬೇಕಾಗಿದೆ. ಶ್ರೇಷ್ಠ ಪದವಿಗಾಗಿ ಚೆನ್ನಾಗಿ ಧಾರಣೆ ಮಾಡಿ ಮತ್ತು ಅನ್ಯರಿಗೂ ಮಾಡಿಸಬೇಕು.

2. ತಂದೆಯ ಸಮಾನ ನಿರಹಂಕಾರಿ ಆಗಬೇಕಾಗಿದೆ. ಅಹಂಕಾರವನ್ನು ಬಿಟ್ಟು ತಂದೆಯ ಜೊತೆ ಅಪಾರ ಪ್ರೀತಿ ಹಾಗೂ ಗೌರವವನ್ನು ಇಡಬೇಕಾಗಿದೆ. ದೇಹಾಭಿಮಾನದಲ್ಲಿ ಬರಬಾರದಾಗಿದೆ.

ವರದಾನ: ಮಾಲೀಕರಾಗಿ ಕರ್ಮೇಂದ್ರಿಯಗಳಿಂದ ಕರ್ಮ ಮಾಡಿಸುವಂತಹ ಕರ್ಮಯೋಗಿ, ಕರ್ಮ ಬಂಧನಮುಕ್ತ ಭವ.

ಬ್ರಾಹ್ಮಣ ಜೀವನ ಕರ್ಮ ಬಂಧನದ ಜೀವನ ಅಲ್ಲ, ಕರ್ಮಯೋಗಿ ಜೀವನವಾಗಿದೆ, ಕರ್ಮೇಂದ್ರಿಯಗಳಿಗೆ ಮಾಲೀಕ ಆಗಿ ಏನು ಇಚ್ಛಿಸುವಿರೊ, ಹೇಗೆ ಇಚ್ಛಿಸುವಿರೊ, ಎಷ್ಟು ಸಮಯ ಕರ್ಮ ಮಾಡಲು ಇಚ್ಛಿಸುವಿರೊ ಹಾಗೆ ಕರ್ಮೇಂದ್ರಿಯಗಳಿಂದ ಮಾಡಿಸುತ್ತಾ ಹೋದಾಗ ಬ್ರಾಹ್ಮಣರಿಂದ ಫರಿಶ್ತಾ ಆಗಿ ಬಿಡುವಿರಿ. ಕರ್ಮ ಬಂಧನ ಸಮಾಪ್ತಿಯಾಗಿ ಬಿಡುವುದು. ಈ ದೇಹ ಸೇವಾರ್ಥವಾಗಿ ಸಿಕ್ಕಿದೆ, ಕರ್ಮ ಬಂಧನದ ಲೆಕ್ಕಾಚಾರದ ಜೀವನ ಸಮಾಪ್ತಿಯಾಯಿತು. ಹಳೆಯ ದೇಹ ಮತ್ತು ದೇಹದ ಪ್ರಪಂಚದ ಸಂಬಂಧ ಸಮಾಪ್ತಿಯಾಯಿತು, ಆದ್ದರಿಂದ ಇದನ್ನು ಮರ್ಜೀವಾ ಜೀವನ ಎಂದು ಹೇಳಲಾಗುವುದು.

ಸ್ಲೋಗನ್: ದಿಲಾರಾಮನ ಜೊತೆಯ ಅನುಭವ ಮಾಡಬೇಕಾದರೆ ಸಾಕ್ಷಿತನದ ಸ್ಥಿತಿಯಲ್ಲಿರಿ.